www.prepp.in

Prepp
Your Personal Exams Guide

UPSC CSE 2017 MAINS PAPER 7 NOVEMBER 03, 2017 KANNADA OPTIONAL PAPER - II QUESTION PAPER

# ಕನ್ನಡ / KANNADA

## ಪತ್ರಿಕೆ II / Paper II

## (ಸಾಹಿತ್ಯ) / ( LITERATURE )

| | |
|---|---|
| ವೇಳೆ : **ಮೂರು** ಗಂಟೆ | ಗರಿಷ್ಠ ಅಂಕಗಳು : **250** |
| *Time allowed : **Three** Hours* | *Maximum Marks : **250*** |

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡ**ದಲ್ಲಿಯೇ ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ. ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** from each section.*

*The number of marks carried by a question / part is indicated against it.*

*Answers must be written in **KANNADA**.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

www.prepp.in

## SECTION A

**Q1.** **ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾಗ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಮಿತಿಯಲ್ಲಿರಲಿ)** *10×5=50*

(a) ಸಕಲಾರಾತಿ ನರೇಂದ್ರ ಮೌಳಿಗಳುರುಳ್ದಾ ದೀಪ್ತ ರತ್ನಾಂಶು ಮಾ
ಳಿಕೆಯಿಂದಾ ರಣರಂಗಮಂ ಬೆಳಗೆ ಕಾಳ್ಗಿರ್ಚಿಂದು ಭೂತಾಂಗನಾ |
ನಿಕರಂ ಶೋಣಿತವಾರಿಯಂ ಕುಡಿದಗುರ್ವಪ್ಪನ್ನೆಗಂ ಸೂಸೆ ನೋ
ಡ ಕವಿಲ್ತಿರ್ದುದು ಕೂಡೆ ಸಂಜೆಗವಿದಂತಾ ದ್ರೋಣನಿಂ ಕೊಳ್ಗುಳಂ ||

(b) ಮಗನು ದಳಪತಿಯಾದ ಗಡ ಕಾ
ಳೆಗವ ನೋಡುವೆನೆಂಬ ವೊಲು ಜಗ
ದಗಲದಲಿ ನೆರೆ ಕಡಿತ ವಿಕ್ಕಿತು ತಿಮಿರ ವನದೊಳಗೆ
ಹೊಗರು ಕುವಳಯ ಕಳಿಯೆ ಸೊಂಪಿನ
ನಗೆ ಸರೋರುಹಕೊಗೆಯೆ ವಿರಹದ
ಧಗೆ ರಥಾಂಗದೊಳಳಿಯೆ ರವಿಯುದಯಾಚಳಕೆ ಬಂದ.

(c) ಛಾಯಾ ಪ್ರತಿಮೆಯ ಛಾಯಾ ಪುರುಷನ
ಛಾಯೆಗೆ ಸುಜ್ಞಾನವಿಲ್ಲ |
ಆಯೆರಡಕೆ ತಿಳಿವೊಡಗೂಡಲದು ತಾನೆ
ಕಾಯದೊಳಿದ್ದಾತ್ಮರೂಪು |

(d) ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
ತವರಾಜದ ನೊರೆ ತೆರೆಯಂತೆ ಆದ್ಯರ ವರ್ಚನವಿರಲು
ಬೇರೆ ಬಾವಿಯ ತೋಡಿ, ಉಪ್ಪು ನೀರನುಂಬುವನ ವಿಧಿಯಂತೆ
ಆಯಿತ್ತೆನ್ನ ಮತಿ ಕೂಡಲ ಸಂಗಮದೇವಾ.

(e) ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರಿ
ಕಣಕ ಕುಟ್ಟೊ ಒನಕಿಲಿ ಹೊಡೆದರೆ ಕುಯ್ ಕುಯ್ ರಾಗವ ಮಾಡುವಿರಿ
ಹುಗ್ಗಿ ಮಾಡೋ ಆಲ್ಲಿಗೆ ಹೋಗಿ ತಗ್ಗಿ ಬಗ್ಗಿ ನೋಡುವಿರಿ
ಹುಗ್ಗಿ ಮಾಡೋ ಸೌಟಲಿ ಹೊಡೆದರೆ ಕುಯ್ ಕುಯ್ ರಾಗವ ಮಾಡುವಿರಿ
ಹಿರಿಯ ಹಾದಿಲಿ ಓಡುವಿರಿ ಕರಿಯ ಬೂದಿಲಿ ಹೊರಳುವಿರಿ
ಸಿರಿ ಕಾಗಿನೆಲೆಯಾದಿಕೇಶವನ ಸ್ಮರಿಸದವರ ಗತಿ ತೋರುವಿರಿ.

www.prepp.in

Prepp
Your Personal Exams Guide

**Q2.** (a) 'ಸುಕುಮಾರ ಸ್ವಾಮಿ' ಕಥೆಯಲ್ಲಿ ತೀವ್ರತಮ ಭೋಗವು ವೈರಾಗ್ಯಕ್ಕೆ ದಾರಿ ಮಾಡಿಕೊಡುವ ಬಗೆಯು ಹೇಗೆ ಚಿತ್ರಣಗೊಂಡಿದೆ ಎಂಬುದನ್ನು ನಿರೂಪಿಸಿ. *20*

(b) ಕರ್ಣನ ಬದುಕೊಂದು 'ದುರಂತಮಯ ವಿಧಿವಿಲಾಸ' ಎಂಬುದನ್ನು ಕುಮಾರವ್ಯಾಸನ ಕಾವ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ. *20*

(c) 'ಜೈನಧರ್ಮ' ಭೋಗದ ಅತಿರೇಕವನ್ನು ತೋರಿಸಿ ವೈರಾಗ್ಯದೆಡೆಗೆ ಕೊಂಡೊಯ್ಯುತ್ತದೆ 'ಭರತೇಶ ವೈಭವ' ದಲ್ಲಿ ಈ ಅಂಶ ಹೇಗೆ ವ್ಯಕ್ತವಾಗಿದೆ ? *10*

**Q3.** (a) ಭಕ್ತಿಯಸ್ವರೂಪಕ್ಕೆ ವಚನಕಾರರು ಕೊಟ್ಟ ಹೊಸ ಆಯಾಮಗಳನ್ನು ನಿಮಗೆ ಇಟ್ಟಿರುವ ವಚನಕಾರರ ಹಿನ್ನೆಲೆಯಲ್ಲಿ ವಿಶದೀಕರಿಸಿ. *20*

(b) ಕನಕ ದಾಸರ ಕೀರ್ತನೆಗಳಲ್ಲಿ ಕಂಡುಬರುವ ಸಾಮಾಜಿಕ ಆಯಾಮಗಳನ್ನು ಸೋದಾಹರಣವಾಗಿ ಚರ್ಚಿಸಿ. *20*

(c) ಕರ್ಣನ ಮೂಲಕ ಯಾವ ಮೌಲ್ಯವನ್ನು ಪಂಪನು ತನ್ನ ವಿಕ್ರಮಾರ್ಜುನ ಕಾವ್ಯದಲ್ಲಿ ಎತ್ತಿ ತೋರಿಸಿದ್ದಾನೆ ? ವಿವರಿಸಿ. *10*

**Q4.** (a) ನಂಬಿಯಣ್ಣನ ರಗಳೆಯಲ್ಲಿ ವ್ಯಕ್ತವಾಗಿರುವ ಭಕ್ತಿಯ ಸ್ವರೂಪ ಎಂತಹದ್ದು ? ಇದನ್ನು ಶೃಂಗಾರಕಾವ್ಯವೂ ಹೌದೆನ್ನಬಹುದೆ ? ಸೋದಾಹರಣವಾಗಿ ವಿವರಿಸಿ. *20*

(b) ಅಲ್ಲಮನ ವಚನಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ಸ್ವರೂಪವನ್ನು ತೌಲನಿಕವಾಗಿ ವಿಶ್ಲೇಷಿಸಿ. *20*

(c) ಭೋಗ ಮತ್ತು ಯೋಗ ಸಂಬಂಧದ ವೈಶಿಷ್ಟ್ಯತೆಯನ್ನು ಭರತೇಶವೈಭವದಲ್ಲಿ ಹೇಗೆ ಪ್ರತಿಪಾದಿಸಲಾಗಿದೆ ? ವಿವರಿಸಿ. *10*

www.prepp.in

Prepp
Your Personal Exams Guide

## SECTION B

**Q5.** **ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ. (ಪ್ರತಿಯೊಂದೂ 150 ಪದಗಳ ಮಿತಿಯಲ್ಲಿರಲಿ)** *10×5=50*

(a) ದೇಶದ ಬಡಜನರ ಮೇಲೆ ಉಳ್ಳವರ ಅಟ್ಟಹಾಸ ಎಂತಹುದೆಂದು 'ಕುರುಡು ಕಾಂಚಾಣ' ಪದ್ಯದಲ್ಲಿ ವಿಡಂಬಿಸಲಾಗಿದೆ ? ವಿವರಿಸಿ.

(b) "ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿದ್ರೂ" ಕನ್ನಡ ಪದವಾಡ್ತೀನಿ ಎಂಬ ರತ್ನನ ಕನ್ನಡಾಭಿಮಾನ ಎಂತಹುದು ? ಚರ್ಚಿಸಿ.

(c) 'ಮಾಧವಿ' ಕಾದಂಬರಿಯಲ್ಲಿ ವ್ಯಕ್ತವಾಗಿರುವ ಹೆಣ್ಣಿನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

(d) 'ಬೆಟ್ಟದಜೀವಿ' ಯ ಜೀವನಾಸಕ್ತಿಯನ್ನು ಕಾದಂಬರಿಯ ವಸ್ತುವಿನ ಹಿನ್ನೆಲೆಯಲ್ಲಿ ವಿಶದೀಕರಿಸಿ.

(e) 'ತುಘಲಕ್' ವಿಲಕ್ಷಣಗಳಿಂದ ಕೂಡಿದ ದುರ್ಬಲ ವ್ಯಕ್ತಿಯೇ ? ಚರ್ಚಿಸಿ.

**Q6.** (a) ಕನ್ನಡದ ನವೋದಯ ಕಥೆಗಳ ವಸ್ತು ಹಾಗೂ ರಚನಾಕ್ರಮವನ್ನು ಕುರಿತು. ನಿಮಗೆ ಇಟ್ಟಿರುವ ಕಥೆಗಳ ಹಿನ್ನೆಲೆಯಲ್ಲಿ ಚರ್ಚಿಸಿ. *20*

(b) ಮನುಷ್ಯ ಸಂಬಂಧಗಳ ಸಂಕೀರ್ಣತೆಯನ್ನು ಚಿತ್ತಾಲರ ಕಥೆಗಳ ಹಿನ್ನೆಲೆಯಲ್ಲಿ ವಿವರಿಸಿ. *20*

(c) ಕನ್ನಡ ಜಾನಪದ ಕಥೆಗಳನ್ನು ಹೇಗೆ ವರ್ಗೀಕರಿಸಲಾಗಿದೆ ? ನಿಮಗಿಟ್ಟಿರುವ ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ. *10*

**Q7.** (a) ದೇವನೂರು ಮಹದೇವ ಅವರ 'ಒಡಲಾಳ' ಕಥೆಯಲ್ಲಿ ವ್ಯಕ್ತವಾಗಿರುವ ತಳ ಸಮುದಾಯದ ಸಂವೇದನೆಗಳನ್ನು ವಿಶ್ಲೇಷಿಸಿ. *20*

(b) 'ನವೋದಯ' ಹಾಗೂ 'ನವ್ಯ' ಕವಿತೆಗಳ ಸಾಮ್ಯತೆ ಮತ್ತು ವೈರುದ್ಯಗಳನ್ನು ವಿವರಿಸಿ. *20*

(c) ಎ.ಎನ್. ಮೂರ್ತಿರಾಯರನ್ನು ವೈಚಾರಿಕ ನೆಲೆಯ ಲೇಖಕ ಎನ್ನಬಹುದೆ ? 'ದೇವರು' ಕೃತಿಯ ಹಿನ್ನೆಲೆಯಲ್ಲಿ ಚರ್ಚಿಸಿ. *10*

www.prepp.in

Prepp
Your Personal Exams Guide

**Q8.** (a) ಕನ್ನಡ ಸಮುದಾಯದಲ್ಲಿ 'ಒಗಟು' ಗಳ ಸ್ಥಾನವೇನು ? ನಿಮಗೆ ಇಟ್ಟಿರುವ ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ. *20*

(b) 'ಜಾನಪದ ಸ್ವರೂಪ' ಕೃತಿಯ ಆಶಯ, ಪರಿಕಲ್ಪನೆಗಳ ಲಕ್ಷಣ, ಇತಿ-ಮಿತಿಗಳನ್ನು ಸೋದಾಹರಣವಾಗಿ ಚರ್ಚಿಸಿ. *20*

(c) 'ಜನಪದ ಗೀತಾಂಜಲಿ' ಕೃತಿಯಲ್ಲಿನ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಮನುಷ್ಯ ಸಂಬಂಧಗಳನ್ನು ವಿವರಿಸಿ. *10*

www.prepp.in